ಕಥೆ

# @ಕ್ಯಾಪ್ಟನ್ ಪ್ರತಾಪ್ ಮೋಹನ್ ಸರ್ಕಲ್...



**ಮಲ್ಲಿಕಾರ್ಜುನ ಶೆಲ್ಲಿಕೇರಿ**

ಕಲೆ: ರೂಪಶ್ರೀ ಕಲ್ಲಿಗನೂರು

ಬಲ ಮೊಣಕಾಲನ್ನು ನೆಲಕ್ಕೆ ಊರಿ, ಎಡ ಮೊಣಕಾಲ ಮೇಲೆ ಎಡ ಮೊಣಕೈ ಮೇಲೆಕ್ಕಿಟ್ಟು ಬಲಗೈಯೊಂದಿಗೆ ಯುದ್ಧದ ಗನ್‌ನ್ನು ವೈರಿಗೆ ಗುರಿಯಾಗಿಸಿ ಎಡಗಾಲಿನ ಪೂರ್ಣಪಾದ ಮತ್ತು ಬಲಪಾದವನ್ನು ಎತ್ತಿ ಮುಂಪಾದದ ಮೇಲೆ ಕುಳಿತ ಭಂಗಿಯಲ್ಲಿನ ಸುಮಾರು ಹತ್ತು ಅಡಿಗಳ ಆ ಕಂಚಿನ ಪ್ರತಿಮೆಯನ್ನು ಕಣ್ಣುಗಳಿಂದ ನೋಡುವುದೇ ಒಂದು ಸಡಗರ. ಸುಮಾರು ಐದು ಅಡಿ ಎತ್ತರದ ಕಟ್ಟೆಯ ಮೇಲಿನ ಆ ಪ್ರತಿಮೆಯ ತಲೆಯ ಮೇಲಿನ ಲೋಹದ ಟೋಪಿ, ಯುದ್ಧದ ಗನ್ನು ವೈರಿ ಸೈನಿಕರ ಮೇಲೆ ಈಗಲೇ ದಾಳಿ ಮಾಡುತ್ತಿರುವರೇನೋ ಎಂಬ ಭಾವಸ್ಫುರಿತ ತೇಜೋಪೂರ್ಣವಾದ ಪ್ರತಿಮೆಯು ರಸ್ತೆಯಲ್ಲಿ ಬರುವವರನ್ನು, ಹೋಗುವವರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಾ ಸರ್ಕಲ್‌ಗೊಂದು ಮೆರುಗನ್ನು ತಂದಿದೆ. ಪ್ರತಿಮೆಯ ಮುಖದಲ್ಲಿರುವ ಆ ತೇಜಸ್ಸು, ಕಣ್ಣುಗಳ ಆ ಕಾಂತಿ, ಕೈಯಲ್ಲಿ ಗನ್ನು ಹಿಡಿದಿರುವ ಆ ವೀರತ್ವದ ಠೀವಿ ಜೀವಂತ ಮನುಷ್ಯನನ್ನೇ ನೆನಪಿಸುತ್ತದೆ. ನಾಲ್ಕು ರಸ್ತೆ ಕೂಡುವ ಜಾಗದ ನಡುವೆ ವರ್ತುಲಾಕಾರದ ಅಲಂಕೃತ ಕಬ್ಬಿಣದ ಕಟಾಂಜನ, ಅದರ ಒಳಗೆ ವಿವಿಧ ತರು-ಲತೆ, ಹೂವುಗಳ ಗಾರ್ಡನ್. ಮತ್ತೆ ಅದರ ಒಳಗಡೆ ಮತ್ತೊಂದು ವರ್ತುಲದ ಕಟಾಂಜನದಲ್ಲಿ ನಿರ್ಮಿಸಿದ ದೊಡ್ಡ ಕಟ್ಟೆ. ಕಟ್ಟೆಯ ಮೇಲೆ ಈ ಪ್ರತಿಮೆ. ಕಟ್ಟೆಯ ಹಿಂದಿನ ಬೃಹತ್ ಅರಳಿ ಮರವು ಆ ಕಟ್ಟೆ ಮತ್ತು ಪ್ರತಿಮೆಗೆ ದೈವತ್ವದ ಕಳೆಯನ್ನು ತಂದಿರುವುದು ಸುಳ್ಳಲ್ಲ. ಅಲ್ಲಿ ಸ್ಥಾಪಿಸಿರುವ ಪ್ರತಿಮೆ ತನ್ನ ಜೀವನದುದ್ದಕ್ಕೂ ಈ ನಾಡಿಗೆ, ದೇಶಕ್ಕೆ ಹೋರಾಡಿದಂತಹ ಮಹಾನ ಚೇತನ, ದೇಶಪ್ರೇಮಿ ಕ್ಯಾಪ್ಟನ್ ಪ್ರತಾಪ್ ಮೋಹನ್ ಪಾಟೀಲ್ ಅವರದು.

ಜಗದೀಶ ಪ್ರತಿದಿನದ ತನ್ನ ವಾಯುವಿಹಾರವನ್ನು ಊರಿನ ನಾಲ್ಕು ರಸ್ತೆ ಕೂಡುವ ಆ ಸರ್ಕಲ್ ಅನ್ನು ಬಳಸಿಕೊಂಡು, ಅಲ್ಲಿಂದ ಗಾವುದ ದೂರದಲ್ಲಿನ ಮೈದಾನದಲ್ಲಿ ಲಘು ವ್ಯಾಯಾಮ ಮಾಡಿ ವಾಪಸ್ ಬರುವುದರೊಳಗೆ ಒಂದೂವರೆ ಗಂಟೆಯ ಕಾಲಾವಧಿಯೇ ಆಗುತ್ತದೆ. ಮರಳಿ ಮನೆಯತ್ತ ಹೋಗುವಾಗ ಯಾವಾಗಲೂ ಸರ್ಕಲಿನ ಆ ಪ್ರತಿಮೆಯನ್ನು ನೋಡುತ್ತಾ ಸಾಗುವುದು ಅನೂಚಾನವಾಗಿ ಬಂದಂಥ ರೂಢಿ. ಅಲ್ಲಿ ಪ್ರತಿಷ್ಠಾಪಿಸಿರುವ ಆ ಪ್ರತಿಮೆಯನ್ನು